ಶ್ರೀ ಕೆ. ಹೆಚ್. ರಂಗನಾಥ್.—ಅಧ್ಯಕ್ಷರೆ, ಯಾವಾಗಲೂ ಅನುಮಾನಪಟ್ಟುಕೊಳ್ಳುವವರಿಗೆ ಔಷಧಿ ಎಲ್ಲಿ ಇದೆ. ಇವರು ಬರೀ ಅನುಮಾನಪಟ್ಟುಕೊಂಡು, ಸಂಕೋಚಪಟ್ಟುಕೊಂಡರೆ ನಾನು ಏನು ಹೇಳಲಿ. ಇದರಿಂದ ತಮ್ಮ ಹಿರೆಕೆರೂರ್ ತಾಲ್ಲೂಕಿನಲ್ಲಿ ೨೭ ಸಾವಿರ ಎಕರೆ ನೀರಾವರಿಗೆ ಬರುತ್ತದೆ. ತಮ್ಮ ಪಕ್ಕದ ರಾಣಿಬೆನ್ನೂರ್‌ಗೆ ಬರುತ್ತದೆ. ಹಾವೇರಿಗೆ ಬರುತ್ತದೆ. ತಮ್ಮ ಸುತ್ತಮುತ್ತ ನೀರಿನ ಅನುಕೂಲ ಆಗುತ್ತದೆ. ತೀರ್ಥಹಳ್ಳಿ ಸದಸ್ಯರು ಚಂದ್ರೇಗೌಡರು ಏನಪ್ಪ ಇಷ್ಟೆಲ್ಲಾ ಆಗುತ್ತಿದೆ, ಮಂಳುಗುವ ಪರಿಸ್ಥಿತಿ ನನಗೆ ಬಂದಿದೆ ಎಂದರು ಇಲ್ಲಿ ಕಳಕಳಿ ವ್ಯಕ್ತಮಾಡುತ್ತಿದ್ದಾರೆ. ನಿಮಗೆ ಬಹಳ ಅನುಕೂಲವಾಗುತ್ತದೆ. ಆದ್ದರಿಂದ ಸರ್ಕಾರ ಮಾಡಿರತಕ್ಕದ್ದನ್ನ ಮಾನ್ಯ ಸದಸ್ಯರು ಮೆಚ್ಚಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್.—ಈ ಹೇಳಿಕೆಯನ್ನು ಕೊಡುವ ಸೌಭಾಗ್ಯ ನಿಮಗೆ ಬಂತಲ್ಲ. ಆದಷ್ಟು ಬೇಗ ಆದನ್ನು ಮಾಡಿ. ಮಾನ್ಯ ಸಚಿವರು ತಾವು ಹೇಳಿದಿರಿ, ಮಂಡಗದ್ದೆ ಮುಳುಗಡೆಯಾಗುತ್ತದೆ ಎಂದು, ಅದನ್ನು ವೆರಿಫೈ ಮಾಡಿ ಹೇಳಬೇಕು. ನನಗೆ ತಿಳಿದ ಪ್ರಕಾರ ಮುಳುಗಡೆಯಾಗುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಸದಸ್ಯರು ಹೇಳಿದ ಅಭಿಪ್ರಾಯ ರೆಕಾರ್ಡ್‌ಗೆ ಹೋಗುತ್ತದೆ, ಅದು ಸರ್ಕಾರಕ್ಕೆ ಬರುತ್ತದೆ.

(iii) ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಆಗುತ್ತಿರುವ ದುರ್ವ್ಯವಹಾರಕ್ಕೆ ತಡೆ

ಶ್ರೀ ಬಿ. ಸ್ವಾಮಿರಾವ್.—ಅಧ್ಯಕ್ಷರೆ, ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಆಗುತ್ತಿರುವ ಲಕ್ಷಾಂತರ ರೂಪಾಯಿಗಳ ಅವ್ಯವಹಾರವನ್ನು ತಡೆಗಟ್ಟುವ ಬಗ್ಗೆ ಮಾನ್ಯ ಕೃಷಿ, ತೋಟಗಾರಿಕೆ, ಶಿಕ್ಷಣ ಮತ್ತು ಅರಣ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೆ, ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಯಾವುದೇ ಅವ್ಯವಹಾರಗಳು ನಡೆದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿಲ್ಲ. ಯಾವುದೇ ಖಚಿತವಾದ ಆಪಾದನೆಗಳನ್ನು ಸರ್ಕಾರದ ಗಮನಕ್ಕೆ ತಂದಲ್ಲಿ ಸೂಕ್ತ ವಿಚಾರಣೆಯನ್ನು ನಡೆಸಲಾಗುವುದು.

ಶ್ರೀ ಬಿ. ಸ್ವಾಮಿರಾವ್.—ಸನ್ಮಾನ್ಯ ಅಧ್ಯಕ್ಷಣಿಯವರೇ, ನನ್ನ ಸೂಚನೆಗೆ ಉತ್ತರ ಬಹಳ ಸಣ್ಣದಾಗಿ ಬಂದಿದೆ. ಇವೊತ್ತು ಇದು ಕೊನೆಯ ಸಬ್ಜಕ್ಟ್ ಆಗಿದೆ, ಕೊನೆಯ ಗಮನಸೆಳೆಯುವ ಸೂಚನೆ ನನ್ನ ಭಾಗಕ್ಕೆ ಬಂದಿದೆ, ಆದರೆ ಇದು ಅತೀ ದೊಡ್ಡ ಸಮಸ್ಯೆ, ಅತೀ ಗಹನವಾದ ವಿಚಾರ. ಆವ್ದರಿಂದ, ಇದು ಐದು ನಿಮಿಷ ಅಥವಾ ಒಂದು ಗಂಟೆಯಲ್ಲಿ ಇತ್ಯರ್ಥವಾದರೆ, ಮುಂದೆನಮ್ಮ ರಾಜ್ಯಕ್ಕೆ ಒದಗತಕ್ಕ ನೂರುಕೋಟಿ ರೂಪಾಯಿ ಮೊತ್ತದಲ್ಲಿ ಮೊದಲನೆಯ ಕಂತಾಗಿ ೫೦ ಕೋಟಿ ರೂಪಾಯಿ ಕೇಂದ್ರಸರ್ಕಾರದವರಂ, ವರ್ಲ್ಡ್ ಬ್ಯಾಂಕ್‌ನಿಂದ ಈಗಾಗಲೇ ಕಳುಹಿಸಿದ್ದಾರೆ. ಅದೂ ಕೂಡ ದುರುಪಯೋಗವಾಗುತ್ತದೆ. ಆದ್ದರಿಂದ, ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುವುದು ಇಷ್ಟೆ, ಹಿಂದೆ ಕೂಡ ಈ ವಿಷಯದ ಬಗ್ಗೆ ವಿಧಾನಸಭೆಯಲ್ಲಿ ಶಾಸಕರು ಮತ್ತು ಮಂತ್ರಿಗಳಿಂದ ಪ್ರಸ್ತಾಪವಾಗಿದೆ. ಅಧಿಕಾರಿಗಳು ಕೊಟ್ಟ ಉತ್ತರವನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದು ಖಂಡಿತ ಸತ್ಯ ಅಲ್ಲ, ಸತ್ಯವಾದ ದಾಖಲೆಗಳು ನನ್ನ ಕೈಯಲ್ಲಿ ಇವೆ. ಆದ್ದರಿಂದ, ಈಗ ದಾಖಲೆ ಮತ್ತು ರಸೀತಿಗಳ ವಿಷಯದ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡಿ ಹೇಳಬೇಕಾಗಿದೆ. ಬೆಂಗಳೂರಿನಲ್ಲಿರತಕ್ಕಂತಹ ಎಸ್ ಜೆ. ಪಾಲಿಟೆಕ್ನಿಕ್‌ಗೆ ಮತ್ತು ಚಿಂತಾಮಣಿಯಲ್ಲಿರತಕ್ಕಂತಹ ಪಾಲಿಟೆಕ್ನಿಕ್‌ನವರು ಬಹಳ ದೊಡ್ಡ ದೊಡ್ಡ ಮೊತ್ತದ ವಸ್ತುಗಳನ್ನು ಕೊಂಡಿದ್ದಾರೆ. ಅವರು ಕೊಂಡಿರತಕ್ಕಂತಹಾದ್ದರ ಬಗ್ಗೆ ಫೋಟೋಗಳು ಇಲ್ಲಿ ಇದೆ. ಒಂದೊಂದು ಐಟಂ ನಲ್ಲಿ ೫೦-೬೦ ಸಾವಿರ ಜಾಸ್ತಿ ಹಾಕಿರತಕ್ಕಂಥ ಉದಾಹರಣೆಗಳು ಇಲ್ಲಿ ಇದೆ. ಆದರೆ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಏನೂ ದುರ್ವ್ಯವಹಾರ ನಡೆದಿಲ್ಲ ಎಂಬ ಉತ್ತರವನ್ನು ನೀಡಿದ್ದಾರೆ. ಒಂದೊಂದು ಹೆಚ್.ಪಿ. ಮೋಟಾರ್‌ಗೆ ೩೬ ಸಾವಿರ ರೂಪಾಯಿ ಹಾಕಿದ್ದಾರೆ. ಬೆಂಗಳೂರು ಎಸ್.ಜೆ. ಪಾಲಿಟೆಕ್ನಿಕ್‌ನವರು ಆದರ ರಸೀದಿಯ ಒರಿಜಿನಲ್ ಜೆರಾಕ್ಸ್ ಕಾಪಿ ಇದೆ. ತಾವೂ ಕೂಡ ರೈತರಾಗಿದ್ದೀರಿ ಆದರ ಬೆಲೆ ಎಷ್ಟು ಎಂಬುದನ್ನು ನೀವೇ ಲೆಕ್ಕ ಹಾಕಿ.

ಶ್ರೀ ಕೆ.ಹೆಚ್. ರಂಗನಾಥ್,—ಸರಕಾರದ ಪರವಾಗಿ ನಾನು ಬಹಳ ಚಿಕ್ಕದಾದ ಉತ್ತರವನ್ನು ಸದನದ ಮುಂದಿಟ್ಟಿದ್ದೇನೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡತಕ್ಕಂಥಾದ್ದು ನೋಡಿದರೆ ಸರಕಾರದ ವತಿಯಿಂದ ನಾನೇನೋ ಮುಚ್ಚಿ ಇಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆಂಬ ಭಾವನೆ ಬರಲಿಕ್ಕೆ ಸಾಧ್ಯತೆ ಇದೆ. ಇದು ಹೇಗೆ ಆಯಿತು ಇದಕ್ಕೆ ಕಾರಣ ಏನು ಎಂಬುದನ್ನು ಈಗಲೂ ಮಾನ್ಯ ಸದಸ್ಯರು ಹೇಳಿದರೆ ಪರಿಶೀಲನೆ ಮಾಡಿಸುತ್ತೇನೆ ಇನ್‌ವೆಸ್ಟಿಗೇಷನ್ ಮಾಡಿಸುತ್ತೇನೆ. ತಾಂತ್ರಿಕ ಶಿಕ್ಷಣ ಇಲಾಖೆ

ಯಲ್ಲಿ ಆಗುತ್ತಿರುವ ಲಕ್ಷಾಂತರ ರೂಪಾಯಿಗಳ ಅವ್ಯವಹಾರವನ್ನು ತಡೆಗಟ್ಟುವ ಬಗ್ಗೆ ಮಾನ್ಯ ಶಿಕ್ಷಣ ಮಂತ್ರಿಗಳ ಗಮನ ಸೆಳೆಯುತ್ತೇನೆಂದು ಹೇಳಿದ್ದಾರೆ. ಇದಕ್ಕೆ ನಾನು ಈ ಸಣ್ಣ ಸ್ಟೇಟ್‌ಮೆಂಟ್ ಅಲ್ಲದೆ ಏನು ಕೊಡುವುದಕ್ಕೆ ಸಾಧ್ಯವಾಗುತ್ತದೆ ? ಇದು ಹೇಗೆ ಆಡಿಟ್ ಆಯಿತು ಹೇಗೆ ಬಂತು ಎಂದು ನನಗೆ ಆಶ್ಚರ್ಯವಾಯಿತು. ಮಾನ್ಯ ಸದಸ್ಯರು ಬೆಚಿತವಾಗಿ ಏನಾದರೂ ಪ್ರಸ್ತಾಪ ಮಾಡಿದ್ದರೆ ಒಳ್ಳೆಯದಿತ್ತು. ಸ್ಪೆಸಿಫಿಕ್ ಆಗಿ ಇದ್ದರೆ ಇನ್ನೊಂದು ರೂಪದಲ್ಲಿ ಮಾನ್ಯ ಸದಸ್ಯರು ಎತ್ತಬಹುದು. ಈ ಉದ್ದೇಶ ಪೂರ್ವಕವಾಗಿ ಮಾಡತಕ್ಕಂತಹ ಅಪರಾಧಗಳು ಏನಾದರೂ ಇದ್ದರೆ ಅದನ್ನು ತಡೆಗಟ್ಟಲೇಕಾಗುತ್ತದೆ, ಒಂದು ವೇಳೆ ಆಗಿದ್ದರೆ ಆದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಯಾವ ಕಾರಣಕ್ಕೂ ಕೂಡ ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ರಕ್ಷಣೆ ಕೂಡ ಕೊಡುವುದಕ್ಕೆ ನಾವು ಹೋಗುವುದಿಲ್ಲ. ಇದನ್ನು ನಿಲ್ಲಿಸುವ ಬಗ್ಗೆ ಕ್ರಮ ತೆಗೆದುಕೊಳ್ಳದೇ ಹೋದರೆ ಮುಂದೆ ತಪ್ಪು ಮಾಡಲು ಅವಕಾಶ ಮಾಡಿ ಕೊಟ್ಟಹಾಗಾಗುತ್ತದೆ. ತಾವು ಲಿಖಿತ ಮೂಲಕ ಕಳಿಸುವುದಾದರೆ ಕಳುಹಿಸಿ. ಅಥವಾ ಬೇರೆ ರೂಪದಲ್ಲಿ ಈ ವಿಚಾರವನ್ನು ತರುವುದಾದರೆ ತರಲಿ. ಅನಿವಾರ್ಯವಾಗಿ ನಾನು ಈ ಉತ್ತರವನ್ನು ಕೊಡಬೇಕಾಯಿತು. ನಿನ್ನೆ ನಾನು ಇದನ್ನು ಅಪ್ರೂವ್ ಮಾಡುವುದಕ್ಕೆ ಮುಂಜೆ ೨–೩ ಸಾರಿ ಯೋಚನೆ ಮಾಡಿ ಮಾಡಿದೆ.

ಶ್ರೀ ಕೆ.ಹೆಚ್. ಪಾಟೀಲ್.—ಇದರ ಬಗ್ಗೆ ಆ ಕಡೆಯವರು ಈ ಕಡೆಯವರು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರ ಗಮನಕ್ಕೆ ಕೂಡ ತಂದಿದ್ದಾ . ಡಾಕ್ಯುಮೆಂಟ್ ಅನ್ನು ಅವರು ನೋಡಿದ ನಂತರ ಇದನ್ನು ಆಡಿಟ್ ಮಾಡಿದ್ದಾರೆ. ಒಂದು ಹೆಚ್.ಪಿ. ಮೋಟಾರ್‌ಗೆ ೩೫ ಸಾವಿರ ರೂಪಾಯಿ ಹಾಕಿದ್ದಾರೆ. ತೀವ್ರವಾಗಿ ವಿಶೇಷವಾದಂತಹ ವಿಚಾರಣೆಯನ್ನು ಮಾಡಬೇಕು. ಸರಕಾರದ ಲೆವೆಲ್‌ನಲ್ಲಿ ಮಾಡಿದರೆ ಕಳ್ಳರು ಸಿಗದೆ ಹೋಗಬಹುದು.

ಶ್ರೀ ಕೆ.ಹೆಚ್, ರಂಗನಾಥ್.—ಚಿಂತಾಮಣಿ ಪಾಲಿಟೆಕ್ನಿಕ್ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ ಅದನ್ನು ಮುಚ್ಚಿಡತಕ್ಕಂಥಾದ್ದು ಸರಿಯಲ್ಲ ನಾನಂತೂ ಅದನ್ನು ಮಾಡುವುದಿಲ್ಲ. I can never be a party for such things. ಏನಾದರೂ ಕೂಡ ಅದು ಈ ಸದನಕ್ಕೆ ಬರಲೇಬೇಕಾಗುತ್ತದೆ. ಈ ಸದನದ ಮೂಲಕ ಹೊರಕ್ಕೆ ಬರಬೇಕಾಗುತ್ತದೆ ತಪ್ಪು ಮಾಡಿದವರಿಗೆ ಶಿಕ್ಷೆಯಾಗಲೇ ಬೇಕು. ಇನ್ನೊಂದು ಸಲ ಆತನು ತಪ್ಪು ಮಾಡಲು ಅವಕಾಶವಾಗುವುದಿಲ್ಲ. ಸರಕಾರದ ನೀತಿ ಕೂಡ ಅದೇ ಆಗಿದೆ. ಮಾನ್ಯ ಸದಸ್ಯರು ಚಿಂತಾಮಣಿ ಪಾಲಿಟೆಕ್ನಿಕ್ ಬಗ್ಗೆ ಪ್ರಸ್ತಾಪ ಮಾಡಿದರು. ೧೯೬೯ರಿಂದ ೮೨ರಲ್ಲಿ ನಡೆದ ಕೃತ್ಯದ ಬಗ್ಗೆ ವಿಚಾರಣೆಯಾದೆ ವಿಚಾರಣೆಯಾಗಿ ೭,೧೯೯ ೯೭೪ ದುಶುಪ ಯೋಗವಾಗಿದೆ ಎಂದು ಹೇಳಿದ್ದಾರೆ, ಮತ್ತೆ ಎಸ್.ಜಿ. ಪಾಲಿಟೆಕ್ನಿಕ್‌ನಲ್ಲಿ ಏಳೂವರೆ ಲಕ್ಷ ರೂಪಾಯಿ ಯಾಗಿದೆ ಎಂದು ೧೯೮೧–೮೨ರಲ್ಲಿ ಬಂದಿದೆ, ಅದರ ವಿಚಾರಣೆ ಕೂಡ ಆಗಿದೆ. ವಿಚಾರಣೆಯಾಗಿ ಚಿಂತಾಮಣಿಯಲ್ಲಿ ಯಾರು ಮೊದಲು ಪ್ರಿನ್ಸಿಪಾಲರಾಗಿದ್ದರು ಅವರು ರಿಟೈರ್ಡ್ ಆಗಿದ್ದಾರೆ. ಆರ್. ಜಯರಾಂ ಎನ್ನುವವರ ಮೇಲೆ ೧೪,೧೯೩ ರೂಪಾಯಿಯ ದುರ್ವ್ಯಪಹಾರದ ಆಪಾದನೆ ಆಗಿ ೮೨೫೨ ರೂಪಾಯಿಯನ್ನು ಅವರಿಂದ ವಸೂಲು ಮಾಡಬೇಕೆಂದು ತೀರ್ಮಾನ ಕೂಡ ಆಗಿದೆ. ಇದು ೧೯೮೧–೮೨ರಲ್ಲಿ ಆಗಿದೆ. ಈಗ ಇದೂ ಅಲ್ಲದೆ ಇನ್ನೂ ಏನಾದರೂ ಇದ್ದರೆ ಅದಕ್ಕೆ ಸಂಬಂಧಪಟ್ಟಂತೆ ಪ್ರಸ್ತಾಪಿಸುವುದಾದರೆ ಬೇರೆ ರೂಪದಲ್ಲಿ ಸಭೆಯ ಮುಂದೆ ತರಬಹುದು. ಇಲ್ಲದಿದ್ದರೆ ನನಗೆ ಪತ್ರವನ್ನು ಬರೆದರೆ ಇದನ್ನು ನಾನು ಪರಿಶೀಲಿಸುತ್ತೇನೆ.

ಉಪಾಧ್ಯಕ್ಷಿಣಿಯಂರು.—ಮಾನ್ಯ ಮಂತ್ರಿಗಳು ಹೇಳಿದಂತೆ ತಮ್ಮ ಹತ್ತಿರ ಇರತಕ್ಕ ಪತ್ರಗಳನ್ನು ಅವರಿಗೆ ತಲುಪಿಸಿ ಇಲ್ಲದಿದ್ದರೆ ಬೇರೆ ರೂಪದಲ್ಲಾದರೂ ತನ್ನಿ.

ಶ್ರೀ ಬಿ. ಸ್ವಾಮಿರಾವ್.—ನನ್ನ ಬೇಡಿಕೆ ಇಷ್ಟೆ ಮಾನ್ಯ ಮಂತ್ರಿಗಳೇ ೭ ಲಕ್ಷ ಮತ್ತು ೧೪ ಲಕ್ಷದ ವಿಚಾರವನ್ನು ಒಪ್ಪಿಕೊಂಡಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಇದು ವಿಚಾರಣೆ ಆಗಿದೆ.

ಶ್ರೀ ಬಿ. ಸ್ವಾಮಿರಾವ್.—ವಿಚಾರಣೆ ಆಗಿರತಕ್ಕದ್ದು ಅವರೇ ಮತ್ತು ಅಲ್ಲಿ ಅಧಿಕಾರದಲ್ಲಿದ್ದಾರೆ. ಇದರಲ್ಲಿ ೨–೩ ಜನರ ಹೆಸರುಗಳು ಕೇಳಬರುತ್ತಿವೆ. ಅವರು ಈಗ ಅಧಿಕಾರದಲ್ಲಿದ್ದಾರೆ. ಬಹಳ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರವಾಗಿರುವುದರ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುತ್ತಿರುವುದು. ಬಂದು ಟ್ರಂಕ್‌ನ್ನು ಇಳಿಸಿದ್ದು ಮತ್ತು ಏರಿಸಿದ್ದರ ಬಗ್ಗೆ ರಸೀತಿಯನ್ನು ಕೊಟ್ಟಿದ್ದಾರೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ವಿಶ್ವ–ಬ್ಯಾಂಕ್‌ನಿಂದ ಸುಮಾರು ೫೦ ಕೋಟಿ ರೂಪಾಯಿ ರಿಲೀಸ್ ಆಗಿದೆ. ಅದನ್ನು ಹಂಚಿಕೊಳ್ಳುವುದಕ್ಕೆ ಇವರು ವ್ಯವಸ್ಥೆ ಮಾಡಿಕೊಂಡಿದ್ದಾರೆ. ಇದರಲ್ಲಿ ಎಷ್ಟು ಅನ್ಯಾಯವಾಗಿದೆ ಎಂದರೆ, ಹರಿಜನರ ಹೆಸರಿನಲ್ಲಿ ಬೇರೆಯವರಿಗೆ ಸೀಟುಗಳನ್ನೆ ಹಂಚಿದ್ದಾರೆ. ಅಲಾಟ್‌ಮೆಂಟ್

ಸೀಟಿಗಿಂತ ಹೆಚ್ಚಿಗೆ ಸೀಟುಗಳನ್ನು ಕೊಟ್ಟಿದ್ದಾರೆ. ಇನ್ನೂ ಅನೇಕ ರೀತಿಯ ಅವ್ಯವಹಾರಗಳು ನಡೆದಿವೆ. ದೊಡ್ಡ ಪ್ರಮಾಣದಲ್ಲಿ ದುರುಪಯೋಗವಾಗಿರುವುದರಿಂದ ಇದನ್ನು ಜ್ಯುಡಿಷಿಯಲ್ ಎನ್‌ಕ್ವೈರಿಗಾಗಲಿ ಅಥವಾ ಸದನದ ಸಮಿತಿಗಾಗಲಿ ಒಪ್ಪಿಸಿದರೆ ಅದಕ್ಕೆ ನನ್ನ ಒಪ್ಪಿಗೆ ಇದೆ. ನನ್ನ ಬಳಿ ಸಾಕಷ್ಟು ದಾಖಲಾತಿಗಳಿವೆ. ಬಹುಶಃ ಇದಕ್ಕಿಂತ ಹೆಚ್ಚಿಗೆ ದಾಖಲಾತಿಗಳನ್ನು ಬೇರೆ ಯಾರೂ ಕೂಡ ಒದಗಿಸಲು ಸಾಧ್ಯವಿಲ್ಲವೆಂದು ಅಂದುಕೊಂಡಿದ್ದೇನೆ. ಆದುದರಿಂದಲೇ ನಾನು ಮೊನ್ನೆಯ ದಿವಸ ಮಾನ್ಯ ಅಧ್ಯಕ್ಷರಿಗೆ ಇದನ್ನು ಕಳುಹಿಸಿಕೊಟ್ಟಿದ್ದೇನೆ. ಕೈಶ್ಚನ್ ಪೇಪರ್‌ನ ಟ್ರಂಕನ್ನು ಮೇಲುಗಡೆ ಇದ್ದುದನ್ನು ಕೆಳಕ್ಕೆ ಇಳಿಸಲಿಕ್ಕೆ ೧೨೦ ರೂಪಾಯಿ, ಮತ್ತೆ ಇದೇ ಟ್ರಂಕನ್ನು ಕೆ.ಎಸ್.ಆರ್.ಟಿ.ಸಿ. ಬಸ್ಸಿಗೆ ಹಾಕುವುದಕ್ಕೆ ೬೦ ರೂಪಾಯಿ, ಮತ್ತೆ ಅದೇ ಟ್ರಂಕನ್ನು ಮೇಲಕ್ಕೆ ತೆಗೆದುಕೊಂಡು ಹೋಗಿದ್ದಕ್ಕೆ ೧೨೦ ರೂಪಾಯಿ ಇದೇರೀತಿ ಮತ್ತೆ ಕೆ.ಎಸ್.ಆರ್.ಟಿ.ಸಿ. ಬಸ್ಸಿಗೆ ಹಾಕಿದ್ದಕ್ಕೆ ೧೦೦ ರೂಪಾಯಿ.

ಉಪಾಧ್ಯಕ್ಷೆಣಿಯವರು.—ತಾವು ಡೀಟೇಲ್ಸ್ ಓದುವುದು ಬೇಡ. ಮಾನ್ಯ ಮಂತ್ರಿಗಳಿಗೆ ಆ ವಿವರಗ್ರಳನ್ನೆಲ್ಲಾ ಕಳುಹಿಸಿಕೊಡಿ.

ಶ್ರೀ ಬಿ. ಸ್ವಾಮಿರಾವ್.—ಇದನ್ನು ಜ್ಯುಡಿಷಿಯಲ್ ಎನ್‌ಕ್ವೈರಿಗೆ ಅಥವಾ ಈ ಸದನದ ಸಮಿತಿಗೆ ಒಪ್ಪಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್.—ಸರ್ಕಾರ ಯಾವುದನ್ನೂ ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಮಾನ್ಯ ಸದಸ್ಯರಾದ ಹಾಲಪ್ಪನವರು ಒಂದು ಕಡತವನ್ನು ನನಗೆ ಕೊಟ್ಟಿದ್ದರು. ಆದರೆ ಅದನ್ನು ನಾನು ಇನ್ನೂ ನೋಡಿಲ್ಲ. ಈಗ ಇದನ್ನು ಕೇಳಿದಮೇಲೆ ಬಹುಶಃ ಮಾನ್ಯ ಹಾಲಪ್ಪನವರು ಕೊಟ್ಟಿದ್ದು ಇದೇ ಕಡತವಿರಬಹುದೇನೋ ಎಂದು ನನಗೆ ಅನಿಸುತ್ತದೆ.

ಶ್ರೀ ಸಿ. ಬೈರೇಗೌಡ.—ಹೋದವರ್ಷವೇ ನಾನು ಅದನ್ನು ಬಿಸಾಕಿದೆ.

ಶ್ರೀ ಕೆ.ಹೆಚ್. ರಂಗನಾಥ್.—ಇದೇ ಇಲಾಖೆಗೆ ಸಂಬಂಧಪಟ್ಟ ನಾರಾಯಣಸ್ವಾಮಿ ಎನ್ನುತಕ್ಕ ಒಬ್ಬ ಅಧಿಕಾರಿ ಚಿತ್ರಮಣಿಯ ಪಾಲಿಟೆಕ್ನಿಕ್‌ನಲ್ಲಿ ಇನ್‌ಸ್ಟ್ರಕ್ಟರ್ ಏನೋ ಆಗಿದ್ದರಂತೆ. ಆವರು ಅಲ್ಲಿರತಕ್ಕ ಪ್ರಿನ್ಸಿಪಾಲ್‌ರವರ ಮೇಲೆ ೧೯೭೯-೮೦ರಲ್ಲಿ ಆಪಾದನೆಯನ್ನು ಮಾಡಿದ್ದಾರೆ. ಈಗ ಇಲ್ಲಿ ಡೈರೆಕ್ಟರ್ ಆಫ್ ಟೆಕ್ನಿಕಲ್ ಎಜುಕೇಷನ್ ಆಗಿರುವವರು, ಹಿಂದೆ ಜಾಯಿಂಟ್ ಡೈರೆಕ್ಟರ್ ಆಫ್ ಟೆಕ್ನಿಕಲ್ ಆಗಿದ್ದರು. ಅವತ್ತು ಅವರಿಗೆ ಇದನ್ನು ಕಳುಹಿಸಿಕೊಟ್ಟಿದ್ದರು. ಅವರು ಇದರ ಬಗ್ಗೆ ವಿಚಾರಣೆ ಮಾಡಿ ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಇದು ೧೯೭೯ರಿಂದ ೮೨ನೇ ಇಸವಿಯವರೆಗೆ ಸಂಬಂಧಪಟ್ಟ ವಿಚಾರಗಳು. ಮಾನ್ಯ ಅಧ್ಯಕ್ಷರೇ ಇವತ್ತು ನಾನು ಅವರ ಬಗ್ಗೆ ಏನೂ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅವರು ನಾರಾಯಣಸ್ವಾಮಿ ಅವರ ಪತ್ರ ಇದೆ. ಅನ್ಯಾಯವಾಗಿದೆ ಇದನ್ನು ನಾವು ಸಮರ್ಥನೆ ಮಾಡುತ್ತೇವೆ ಹಾಗೆಂದು ಹೇಳಿ ಆತನು ಮಾಡುತ್ತಿದ್ದಾನೆ. ನಾನೂ ಕೂಡ ಅದನ್ನು ನೋಡಲಿಲ್ಲ. ಈಗಾಗಲೇ ಅದು ವಿಚಾರಣೆಯಾಗಿದೆ. ಪುನರ್ ವಿಚಾರಣೆ ಮತ್ತೆ ಮಾಡಿಸಲಿಕ್ಕೆ ಅವಶ್ಯಕ ವಿದ್ದಂಥ ಕಾರಣಗಳು ಇದೆಯೇ ಎನ್ನುವುದನ್ನು ನೋಡಬೇಕಾಗುತ್ತದೆ. ಇನ್‌ಸ್ಟ್ರಕ್ಟರ್ ಹೇಳಿದರೆ ಆತ ಒಬ್ಬ ಹರಿಶ್ಚಂದ್ರ ಬಾಕಿಯವರು ಇಲ್ಲ ಎನ್ನುವ ಈ ಪ್ರಶ್ನೆ ಬರುತ್ತದೆ. ತಪ್ಪಾಗಿದ್ದರೆ ಅದಕ್ಕೆ ಏನು ಮಾಡಬೇಕೋ ಅದನ್ನು ಮಾಡೋಣ. ಅದಕ್ಕೆ ನಾನು ಹೇಳುವುದು ಇನ್ನು ಯಾವುದಾದರೂ ಬೇರೆ ರೂಪದಲ್ಲಿ ಪ್ರಸ್ತಾಪ ಮಾಡಲಿಕ್ಕೆ ಸಾಧ್ಯವಿದ್ದರೆ ತಾವು ಮಾಡಬೇಕು.

ಶ್ರೀ ಡಿ.ಬಿ. ಚಂದ್ರೇಗೌಡ.—ಇದು ಗಮನ ಸೆಳೆಯುವ ಸೂಚನೆಗಾಗಿ ಬಿತಕ್ಕೆ ಬಂದಿತು ಎಂದರೆ ಇದು ಒಂದು ಬಹಳ ಗಹನವಾದ ವಿಚಾರ. ಆದ್ದರಿಂದ ಸನ್ಮಾನ್ಯ ಸಭಾಧ್ಯಕ್ಷೆಣಿಯವರೇ ಒಪ್ಪಿಕೊಂಡಿದ್ದಾರೆ.

ಶ್ರೀ ಕೆ.ಹೆಚ್. ರಂಗನಾಥ್.—ಬಂದಿದೆ, ಬಂದುದರಿಂದ ಎರಡು ಲೈನ್ ಉತ್ತರ ಬರೆದಿದ್ದಾರೆ. ಅದಕ್ಕಿಂತ ಹೆಚ್ಚಿಗೆ ಬರೆಯಲಿಲ್ಲ.

ಉಪಾಧ್ಯಕ್ಷೆಣೀಯವರು.—ಈಗ ಪರ್ಟಿಕ್ಯುಲರ್ ಕೇಸ್ ಬಗ್ಗೆ ಅವರು ಹಾಕಿಲ್ಲ. ಗಮನ ಸೆಳೆಯುವ ಸೂಚನೆಯಾಗಿ ಹೇಳಿದ್ದಾರೆ. Therefore, it was admitted. There was no mention in the notice to the case he is referring now.

SRI D.B. CHANDRE GOWDA.—The point is, not that I am taking objection to the matter being discussed here ಅವರು ಹೇಳುವ ಪ್ರಮಾಣದ ಅವ್ಯವಹಾರಗಳಾಗಿದ್ದರೆ ಕಾಲ್‌ಅಟೆನ್‌ಷನ್‌ನಲ್ಲಿ ನಿರ್ಣಯವಾಗುವುದಿಲ್ಲ. ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲಿ ಸದನಕ್ಕೆ ಸಮಾಧಾನವಾಗುವುದಿಲ್ಲ. ಮಂತ್ರಿಗಳು ಉತ್ತರ

ಹೇಳುವುದಕ್ಕೆ ಕಷ್ಟ. ಸದಸ್ಯರಿಗೂ ಸಮಾಧಾನವಾಗುವುದಿಲ್ಲ. ಏನೋ ಕ್ಯಾಶುಯಲ್ ಆಗಿ ದೊಡ್ಡ ವಿಚಾರವನ್ನು ಚರ್ಚೆ ಮಾಡುತ್ತೇವೆಂದು ಸಮಾಧಾನವಾಗುತ್ತದೆ.

ಶ್ರೀ ಬಿ. ಸ್ವಾಮಿರಾವ್.—ಇದು ಹಳೆಯ ವಿಚಾರಕೂಡ ಹೌದು ಮತ್ತು ಈಗ ಆಪ್ ಟು ಡೇಟ್ ನಡೆಯತಕ್ಕಂಥ ವಿಚಾರಕೂಡ ಹೌದು. ತಾವು ಏನು ನಾರಾಯಣಸ್ವಾಮಿ ಎಂದು ಹೇಳಿದರಲ್ಲ ಅವರ ಒಳ್ಳೆಯ ಲೆಕ್ಚರರ್ ಕೂಡ ಹೌದು. ಮತ್ತು ಪ್ರಾಮಾಣಿಕವಾಗಿ ನಡೆದುಕೊಂಡವರು ಹೌದು. ಅವರು ಇಲ್ಲಿ ಏನಾದರೂ ಇದ್ದರೆ ಅನ್ಯಾಯ ಮಾಡುವುದಕ್ಕೆ ಬಿಡುವುದಿಲ್ಲ. ಇದನ್ನೆಲ್ಲಾ ಸಾರ್ವಜನಿಕವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆಂದು ಹೇಳಿ ಅವರು ಅವರನ್ನು ಗುಲ್ಬರ್ಗಾಕ್ಕೆ ಟ್ರಾನ್ಸ್‌ಫರ್ ಮಾಡಿದ್ದು ಹೌದು. ಇದನ್ನು ವಿರೋಧಿಸಿ ಉಪವಾಸ ಸತ್ಯಾಗ್ರಹ ಮಾಡಿ ಅದು ಒಂದು ದೊಡ್ಡ ಕತೆಯಾಗಿ, ಆ ದೊಡ್ಡ ಕಥೆಯಲ್ಲೂ ಕೂಡ ಒಂದು ವೇಳೆ ತಪ್ಪಾಗಿದ್ದರೆ ನನ್ನನ್ನು ಕೆಲಸದಿಂದ ತೆಗೆಯಿರಿ, ಇಲ್ಲದಿದ್ದರೆ ಅವರನ್ನಾದರೂ ಕೆಲಸದಿಂದ ತೆಗೆಯಿರಿ ಎಂದು ಚಾಲೆಂಜ್ ಮಾಡಿದ್ದಾರೆ. ಆತನು ಬರೆದು ಕೊಟ್ಟಿದ್ದಾರೆ. ಮತ್ತೆ ಇದನ್ನು ಮಾಡದೆ ಹೋದರೆ ನಾನು ಈ ಅನ್ಯಾಯವನ್ನು ನೋಡಿ ಸಹಿಸಿ ಕೊಂಡಿರುವುದಿಲ್ಲ. ಒಂದು ಬಾಟಲ್ ಪಾಲಿಡಾಲ್‌ನ್ನು ಕುಡಿಯುತ್ತೇನೆಂದು ಅವರು ಬರವಣಿಗೆಯಲ್ಲೂ ಕೂಡ ಕೊಟ್ಟಿದ್ದಾರೆ.

SRI K.H. RANGANATH.—As per Indian Penal Code, it is a very serious offence. He cannot do that also. An attempt to commit suicide is also an offence.

ಉಪಾಧ್ಯಕ್ಷಣಿಯವರು.—ಮಾನ್ಯ ಸದಸ್ಯರು ತಮ್ಮ ಹತ್ತಿರ ಇರತಕ್ಕಂಥ ಎಲ್ಲಾ ಕಾಗದ ಪತ್ರಗಳನ್ನು ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಡಿ,

ಶ್ರೀ ಬಿ. ಸ್ವಾಮಿರಾವ್.—ಪತ್ರಗಳನ್ನು ದಾಖಲೆಗಳನ್ನು ಎಲ್ಲಾ ಕಳುಹಿಸಿಕೊಡುತ್ತೇನೆ. ತಾವು ಅದನ್ನು.....

ಶ್ರೀ ಕೆ.ಹೆಚ್. ರಂಗನಾಥ್.—ಅದಕ್ಕೆ ನಾನು ಹೇಳುವುದನ್ನು ಪ್ರೊಸೀಜರ್ ಪ್ರಕಾರ ಇನ್ನೊಂದು ಯಾವುದಾದರೂ ರೂಪದಲ್ಲಿ ಅಭ್ಯಾಸಮಾಡಿ ಪ್ರಸ್ತಾಪ ಮಾಡಲಿಕ್ಕೆ ಅವಕಾಶವಿದೆ. ಬೇರೆ ರೀತಿಯಲ್ಲಿ ತರಬಹುದು. ಅದಕ್ಕೆ ನನ್ನದೇನು ಅಭ್ಯಂತರವಿಲ್ಲ. ಆದರೆ ಒಂದು ಮಾತನ್ನು ಸದಸ್ಯರಿಗೆ ಹೇಳಿದರು, ಇವತ್ತು ಪಾಲಿಟೆಕ್ನಿಕ್‌ಗೆ ಬಲಪಡಿಸುವುದಕ್ಕೆ ೫೦ ಕೋಟಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ, ಅಲ್ಲಿ ಬಹಳ ವರ್ಷಗಳಿಂದ ಬರದಿರತಕ್ಕಂಥದ್ದು ಈಗ ಕಾರ್ಯಗತವಾಗುತ್ತಿದೆ. ಆದಕ್ಕೂ ಇದಕ್ಕೂ ಯಾವ ಸಂಬಂಧವಿಲ್ಲ. ಆ ಉಪಾಧ್ಯಾಯರು ಇದನ್ನು ಲಿಂಕ್ ಮಾಡುವುದಾದರೆ ನನಗನ್ನಿಸುತ್ತದೆ, ಅವರಿಗೆ ಏನೋ ಸರಿಯಿಲ್ಲವೆಂದು.

ಉಪಾಧ್ಯಕ್ಷಣಿಯವರು.—ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ.

ಶ್ರೀ ಬಿ. ಸ್ವಾಮಿರಾವ್.—೫೦ ಕೋಟಿ ರೂಪಾಯಿಗಳಿಗೆ ಮೇಲ್ಪಟ್ಟು ಅದಕ್ಕಾಗಿ ವರ್ಲ್ಡ್ ಬ್ಯಾಂಕಿನಿಂದ ಬಂದಿದೆ. ಬಂದಿರತಕ್ಕ ಹಣವನ್ನು ಡೈವರ್ಷನ್ ಮಾಡಿ.....

ಉಪಾಧ್ಯಕ್ಷಣಿಯವರು.—ಈ ವಿಷಯವನ್ನು ಇಲ್ಲಿಗೆ ಮುಗಿಸುತ್ತೇನೆ. ಮುಂದೆ ಅಲ್ಪ ಕಾಲಾವಧಿ ಪ್ರಶ್ನೆ ಪಟ್ಟಿ—ಶ್ರೀ ಎಂ. ವಿ. ವೆಂಕಟಪ್ಪನವರು.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಉಪಾಧ್ಯಕ್ಷಣಿಯವರು.—ದಯವಿಟ್ಟು ಕುಳಿತುಕೊಳ್ಳಬೇಕು, ತಮಗೆ ಮಾತನಾಡಲಿಕ್ಕೆ ಸಾಕಷ್ಟು ಸಮಯ ಕೊಡಲಾಗಿದೆ.